**3.**

# 2ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

**ಓ.ಎಸ್. ನಂ. 171/2026**
**ಪಿ.ಡಬ್ಲ್ಯೂ- 1**

**<u>ದಿನಾಂಕಃ 17-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿಪಿ-1 | ವಾದಿಯ ಆಧಾರ ಕಾರ್ಡ (ಮೂಲ ಪ್ರತಿ ನೋಡಿ ನಕಲು ಪ್ರತಿ ನಿಶಾನೆಗೊಳಿಸಲಾಯಿತು) |
| ನಿಪಿ-2 | ವಾದಿಯ ತಾಯಿಯ ಆಧಾರ ಕಾರ್ಡ (ಮೂಲ ಪ್ರತಿ ನೋಡಿ ನಕಲು ಪ್ರತಿ ನಿಶಾನೆಗೊಳಿಸಲಾಯಿತು) |
| ನಿಪಿ-3 | ವಾದಿಯ ತಂದೆಯ ಆಧಾರ ಕಾರ್ಡ (ಮೂಲ ಪ್ರತಿ ನೋಡಿ ನಕಲು ಪ್ರತಿ ನಿಶಾನೆಗೊಳಿಸಲಾಯಿತು) |
| ನಿಪಿ-4 | ಜನನ ಪ್ರಮಾಣ ಪತ್ರ |
| ನಿಪಿ-5 | ಪುರಸಬೆ ಕಾರ್ಯಾಲಯ ಘಟಪ್ರಬಾರವರು ವಾದಿಯ ತಂದೆಗೆ ದಿಃ 21.01.2026 ರಂದು ನೀಡಿದ ಮರುಉತ್ತರ |

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ.2 ಪರ ವಕೀಲರಿಂದಃ**

ನನ್ನ ಮಗನು ಕಡಾಡಿ ಆಸ್ಪತ್ರೆ ಘಟಪ್ರಬಾನಲ್ಲಿ ಜನಿಸಿದ್ದಾನೆ . ನನ್ನ ಮಗನ ಜನ್ಮ ದಿನಾಂಕ 14.10.2023. ನನ್ನ ಮಗನನಾಮಕರಣದ ನಂತರ ಆತನ ಹೆಸರು ಸೇರಿಸಲು ಪುರಸಬೆಗೆ ನನ್ನ ಅತ್ತೆ ಹೋಗಿದ್ದರು. ನನ್ನ ಅತ್ತೆ ಹೇಳಿದ ಪ್ರಕಾರ ಪುರಸಬೆಯವರು ನ್ನನ ಮಗನ ಹೆಸರನ್ನು ದಾಖಲಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪುರಸಭೆ ಕಾರ್ಯಾಲಯದಿಂದ ನನ್ನ ಮಗನ ಜನನ ಪ್ರಮಾಣ ಪತ್ರ ಪಡೆದುಕೊಂಡಿದ್ದೇನೆ . ಜನನ ಪ್ರಮಾಣ ಪತ್ರ ಪಡೆದ ನಂತರ ಸದರಿ ದಾಖಲೆಯಲ್ಲಿ ನನ್ನ ಮಗನ ಹೆಸರು ತಪ್ಪಾಗಿ ನಮೂದಾಗಿದೆ ಎಂದು ನನಗೆ 6 ತಿಂಗಳ ಹಿಂದೆ ಗೋತ್ತಾಗಿರುತ್ತದೆ. ನನ್ನ ಮಗನ ಹೆಸರು ಶ್ರೀತನ ಎಂದು ತೋರಿಸಲು ನನ್ನ ಹತ್ತರ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಿಪಿ1 ನಾನು ಸೃಷ್ಪಿಸಿದ ದಾಖಲೆ ಎಂದರೆ ಸರಿಯಲ್ಲ.

ಪ್ರತಿವಾದಿಯವರ ತಪ್ಪಿನಿಂದ ನನ ಮಗನ ಹೆಸರು ತಪ್ಪಾಗಿ ದಾಖಲಾಗಿಲ್ಲ ಎಂದರೆ ಸರಿಯಲ್ಲ.

ನಾನು ದಾವೆಗೆ ಅನುಕೂಲವಾಗಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ಸಂಗತಿಗಳು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ನಾನು ಅವಧಿ ಮೀರಿದ ದಾವೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ದಾವೆಗೆ ಯಾವದೇ ಕಾರಣ ಇಲ್ಲಾ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1** ನೇ ಪ್ರತಿವಾದಿ ಪರ ವಕೀಲರು 2 ನೇ ಪ್ರತಿವಾದಿ ಪರ ವಕೀಲರು ಮಾಡಿ ಪಾಟೀ ಸವಾಲನ್ನು ತನ್ನ ಪಾಟೀ ಸವಾಲಾಗಿ ಅಳವಡಿಸಿಕೊಳ್ಳುತ್ತಾರೆ ಎಂದು ನುಡಿದಿರುತ್ತಾರೆ .

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.